ಉಪಾಧ್ಯಕ್ಷರು.— ಈಗ ಅನೇಕ ಜನ ಮಾನ್ಯ ಮಂತ್ರಿಗಳು ಮಂಲ್ಯನೆಯಲ್ಲಿದ್ದಾರೆ. ಆದ್ದರಿಂದ ಅವರ ಗಮನಕ್ಕೆ ತಂದು ಉತ್ತರಗಳನ್ನು ಸಂಬಂಧಪಟ್ಟ ಮಾನ್ಯ ಸದಸ್ಯರಿಂಗಳಿಗೆ ಕಳುಹಿಸಿಕೊಡಲಾಗುವುದೆಂದು ಅವರು ಹೇಳಿದ್ದಾರೆ.

೨) ರಾಜ್ಯದಲ್ಲಿ ಶಿಕ್ಷಣ ಸಂಸ್ಥೆಗಳಲ್ಲಿ ದೈಹಿಕ ಶಿಕ್ಷಕರ ಬೇಡಿಕೆಗಳು ಹಲವಾರು ವರ್ಷಗಳಿಂದ ಈಡೇರದಿರುವುದು

ಶ್ರೀ ಬಾಬುರೆಡ್ಡಿ ವಿ. ತುಂಗಳ್.— ಮಾನ್ಯ ಅಧ್ಯಕ್ಷರೇ, ರಾಜ್ಯದ ಹಲವಾರು ಶಿಕ್ಷಣ ಸಂಸ್ಥೆಗಳಲ್ಲಿ ಸಹಸ್ರಾರು ದೈಹಿಕ ಶಿಕ್ಷಣ ಶಿಕ್ಷಕರು ಹಲವಾರು ವರ್ಷಗಳಿಂದ ಕಾರ್ಯ ಮಾಡುತ್ತಾ ಬಂದಿದ್ದು ದುರ್ದೈವದಿಂದ ಈ ನತದೃಷ್ಟ ಜನರ ಬೇಡಿಕೆಗಳು ಈಡೇರಲಾರದೆ ಹಾಗೇ ಉಳಿದುಕೊಂಡಿವೆ. ಇತರ ಶಿಕ್ಷಕರಿಗೆ ಯಾವುದೇ ರೀತಿಯಲ್ಲಿ ಕಡಿವೆಯಿರದ ಈ ಜನರಿಗೆ ತಾರತಮ್ಯ ತೋರಿಸುತ್ತಿರುವುದು ವಿಷಾಧದ ಸಂಗತಿ. ನಮ್ಮ ಮಕ್ಕಳ ಆರೋಗ್ಯವನ್ನು ರೂಪಿಸಬೇಕಾದ ಈ ಜನರು ನಿಜವಾಗಿಯೂ ಕಷ್ಟದಲ್ಲಿದ್ದು ಈವರೆಗೆ ಅವರ ಕೂಗು ಕೇಳಿಸಿಯೇ ಇಲ್ಲ.

೧) ದೈಹಿಕ ಶಿಕ್ಷಣ ವಿಷಯವನ್ನು ಪ್ರಾಥಮಿಕ ಹಂತದಿಂದ ಪೂರ್ವ ತರಗತಿಯವರೆಗೆ ಕಡ್ಡಾಯವಾಗಿರಿಸುವುದು.

೨) ಎಲ್ಲಾ ದೈಹಿಕ ಶಿಕ್ಷಣ ಶಿಕ್ಷಕರಿಗೂ ಇತರ ಶಿಕ್ಷಕರಿಗೆ ದೊರೆಯುವ ವೇತನ, ಸೇವಾ ಹಿರಿತನ ಹಾಗೂ ಇತರ ಸೌಲಭ್ಯ – ಸೌಕರ್ಯಗಳನ್ನು ಕೊಡಬೇಕು.

೩) ಹೊಸ ಹುದ್ದೆಗಳನ್ನು ಸೃಷ್ಟಿಸುವ ಮುಖಾಂತರ ಎಲ್ಲ ದೈಹಿಕ-ಶಿಕ್ಷಕರಿಗೂ ಬಡ್ತಿ ಕಲ್ಪಿಸಿಕೊಡುವುದು.

೪) ಗುತ್ತಿಗೆ ಆಧಾರಿತ ದೈಹಿಕ ಶಿಣ ಶಿಕ್ಷಣೆಕರನ್ನು ಖಾಯಂ ಗೊಳಿಸುವುದು,

೫) ೧೯೭೦ಕ್ಕೂ ಮೊದಲಿದ್ದ ವೇತನ ಶ್ರೇಣಿಯಲ್ಲಿ ಆಗಿರುವ ೧೩೦-೨೧೦ರ ಅನ್ವಯವನ್ನು ಎಲ್ಲಾ ಹಂತದಲ್ಲಿಯೂ ಪರಿಷ್ಕರಿಸುವುದು,

ಈ ಎಲ್ಲ ಬೇಡಿಕೆಗಳ ಈಡೇರಿಕೆಗಾಗಿ ದೈಹಿಕ ಶಿಕ್ಷಣ ಶಿಕ್ಷಕರೆಲ್ಲ ಸಂಘಟಿತರಾಗಿ ಇಂದಿನಿಂದ ಪ್ರತಿಭಟನೆ ಆರಂಭಿಸಿದ್ದು ಅವರ ಬಹುದಿನಗಳ ಬೇಡಿಕೆಯನ್ನು ಈಡೇರಿಸಬೇಕೆಂದು ತಮ್ಮ ಮೂಲಕ ಮಾನ್ಯ ಶಿಕ್ಷಣ ಸಚಿವರ ಗಮನಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟ ಸಚಿವರಿಂದ ಅವರಿಗೆ ಉತ್ತರವನ್ನು ಕಳುಹಿಸಿಕೊಡುತ್ತೇವೆ.

ಮಂಗಳೂರಿನಲ್ಲಿ 28-11-1986ರಂದು ನಡೆದ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಬೃಹತ್ ಸಮ್ಮೇಳನ

ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ),—ಮಾನ್ಯ ಅಧ್ಯಕ್ಷರೇ, ದಿ. ೨೮-೧೧-೮೬ ರಂದು ಮಂಗಳೂರಿನಲ್ಲಿ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಬೃಹತ್ ಸಮ್ಮೇಳನ ಜರುಗಿತು, ಕರ್ನಾಟಕ ರಾಜ್ಯದ ಗೌರವಾನ್ವಿತ ಮುಖ್ಯಮಂತ್ರಿಗಳು ಸಮ್ಮೇಳನಕ್ಕೆ ಆಗಮಿಸಿದರು, ಭಾಷಣ ಮಾಡಿದರು, ಭರವಸೆ ನೀಡಿದರು – 'ಶಿಕ್ಷಕವೃತ್ತಿ ಪವಿತ್ರವಾದುದು, ಸಮಾನವೇತನ ಹಾಗೂ ಸೌಲಭ್ಯಗಳನ್ನು ನೀಡಲೇಬೇಕು, ತಾರತಮ್ಯಕ್ಕೆ ನಾನು ಹಾಗೂ ನಮ್ಮ ಸರ್ಕಾರ ಒಪ್ಪುವುದಿಲ್ಲ, ಈ ಬಗ್ಗೆ ಶೀಘ್ರ ಕಾರ್ಯಪ್ರವೃತ್ತರಾಗುತ್ತೇವೆ' ಈ ಭರವಸೆ ನೀಡಿ ೧೬ ತಿಂಗಳಾಯಿತು. ಏನು ಸುಧಾರಣೆ ಆಗಿದೆ ? ಈಗಿನ ಪರಿಸ್ಥಿತಿಯನ್ನು ಸರ್ಕಾರದ ಮುಂದಿಡಬಯಸುತ್ತೇನೆ.

೧ ಪ್ರತಿ ತಿಂಗಳ ಮೊದಲ ದಿನ ವೇತನ ನೀಡಬೇಕು – ಇದಕ್ಕೆ ಅಲಾಟ್‌ಮೆಂಟ್ ಇಲ್ಲ ಎಂಬ ಉತ್ತರ. ಅಲಾಟ್‌ಮೆಂಟಿಗೆ ತಿಂಗಳುಗಟ್ಟಲೆ ವಿಳಂಬ.

೨ ಸಮಾನವೇತನದ ಬದಲು ಅನುದಾನಿತ ಶಾಲಾ ಶಿಕ್ಷಕರಿಗೆ ಪರಿಷ್ಕರಣ ಪೂರ್ವ ವೇತನದ ಶೇಕಡಾ ೭೫ ಮಾತ್ರ ಪಾವತಿಯ ಸೂಚನೆ.

೩ ಸರ್ಕಾರಿ ಶಾಲಾ ಅಧ್ಯಾಪಕರಿಗೆ ೫ ಬಾರಿ ಅಜ್ಜಿ ಮಾಡಿ, ಹೈದರಾಬಾದ್ ವೇತನ ಶ್ರೇಣಿ ನೀಡಿದ್ದರೂ, ಅನುದಾನಿತ ಪ್ರೌಢಶಾಲಾ ವ್ಯಾಯಾಮ ಶಿಕ್ಷಕರಿಗೆ ಸದಾ ಮಂಜೂರಾಗಿದ್ದರೂ, ಉಳಿದ ಅನುದಾನಿತ ಶಾಲಾ ಶಿಕ್ಷಕರಿಗೆ ಈ ಶ್ರೇಣಿ ಸೌಲಭ್ಯ ಇಲ್ಲ.

೪ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮುಖ್ಯೋಪಾಧ್ಯಾಯರ ಹುದ್ದೆಗೆ ಹಿರಿತನದ ಆಧಾರದಲ್ಲಿ ಬಡ್ತಿ ಇಲ್ಲ.

೫ ೧೯೬೦ರ ತನಕ ಮಕ್ಕಳ ಸಂಖ್ಯೆಗನುಗುಣವಾಗಿ ಹೆಚ್ಚುವರಿ ಶಿಕ್ಷಕರ ನೇಮಕ, ನಿವೃತ್ತಿ ಹೊಂದಿದ, ಮರಣ ಹೊಂದಿದ ಸ್ಥಾನಗಳಿಗೆ ನೇಮಕ, ಇವುಗಳಿಗೆ ತಡೆ, ರೋಸ್ಟರ್ ಪ್ರಕಾರ ಅಧ್ಯಾಪಕರು ಸಿಗದಿದ್ದಲ್ಲಿ ಸ್ಥಾನ ಖಾಲಿ ಇಡಬೇಕಾದ ಪರಿಸ್ಥಿತಿ, ಇದರಿಂದಾಗಿ ವಿದ್ಯಾರ್ಥಿಗಳಿಗೆ ತೊಂದರೆ.

೬ ಗ್ರಾಜ್ಯುಯಿಟಿ ಬಗ್ಗೆ ಸಂಪೂರ್ಣ ಸೇವೆ ಗಣನೆಗೆ ತೆಗೆದುಕೊಳ್ಳುವುದಿಲ್ಲ.

ಈ ಎಲ್ಲಾ ವಿಚಾರಗಳನ್ನು ಸರ್ಕಾರ ಕೂಡಲೇ ಗಮನಹರಿಸಬೇಕು, ನೆರೆಯ ಕೇರಳಾ ರಾಜ್ಯದಲ್ಲಿ ಮಾಡಿದಂತೆ ಅನುದಾನಿತ ಶಿಕ್ಷಕರ ಸೇವೆ ರಾಷ್ಟ್ರೀಕರಿಸಬೇಕು, ಸಮಾನ ವೇತನ ಸೌಲಭ್ಯ ನೀಡಲು, ತಾರತಮ್ಯ ತೊಲಗಿಸಲು ೧೬ ತಿಂಗಳ ಹಿಂದೆ ಗೌರವಾನ್ವಿತ ಮುಖ್ಯಮಂತ್ರಿಗಳು ನೀಡಿದ ಭಾಷಣದ ಭರವಸೆಯ ಆಗಿಲುಳಿಯದೆ ಕಾರ್ಯರೂಪಕ್ಕೆ ಕೂಡಲೇ ಬಂದು, ಭರವಸೆನೀಡಿದವರ ಗೌರವವೂ ಉಳಿಯಬೇಕು ಎಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

೧೨-೩೦ ಪಿ.ಎಂ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಉತ್ತರ ತರಿಸಿಕೊಡುತ್ತೇನೆ.

ಹೊಂಬಳ ಗ್ರಾಮದಲ್ಲಿ ಹಿಂದುಳಿದ ವರ್ಗದವರು ವಾಸಿಸುವ ಜನತಾ ಮನೆಗಳಿಗೆ ವಿದ್ಯುತ್ ಬಲ್ಬ್‌ಗಳನ್ನು ಹಾಕದೇ ಇರುವುದು

ಶ್ರೀ ಕೆ.ಹೆಚ್ ಪಾಟೀಲ್.—ವಿರೋಧ ಪಕ್ಷದ ಸದಸ್ಯರು ಯಾವುದೇ ಸಮಸ್ಯೆಯನ್ನು ಯಾವುದರ ಸಲುವಾಗಿ ತರುತ್ತಾರೆ ಅಂದರೆ ಜನರ ಸಮಸ್ಯೆಯನ್ನು ಸರ್ಕಾರದ ತೀವ್ರ ಗಮನಕ್ಕೆ ತರುವುದಕ್ಕಾಗಿ, ಈ ನಿಯಮದ ಪ್ರಕಾರ ತರುತ್ತಾರೆ. ಮೊದಲು ಜೀರೋ ಹವರ್ ಇತ್ತು ಆದಕ್ಕೆ ಬಹಳ ಹೊತ್ತು ಹಿಡಿಯುತ್ತದೆ ಎಂದು ಈ ನಿಯಮದ ಕೆಳಗೆ ವಿಷಯಗಳನ್ನು ತರುವುದಕ್ಕೆ ಅವಕಾಶ ಮಾಡಲಾಯಿತು. ಇದರಲ್ಲಿ ಸಂಬಂಧಪಟ್ಟ ಮಂತ್ರಿಗಳು ಇರಲೇಬೇಕು, ಅಂತಹ ಯಾವುದಾದರೂ ಅನಿವಾರ್ಯ ಪ್ರಸಂಗ ಇದ್ದರೆ ಮಂತ್ರಿಗಳು ಹೊರಗೆ ಹೋದಾಗ ಮಾನ್ಯ ಲಕ್ಷ್ಮೀಸಾಗರ್‌ರವರು ಉತ್ತರ ಹೇಳುತ್ತಾರೆ. ಆದರೆ ಎಲ್ಲಾ ಮಂತ್ರಿಗಳು ಲಾಂಜ್‌ನಲ್ಲಿ ಕುಳಿತು ಇಲ್ಲಿ ಸದನ ನಡೆಸಿದರೆ it is really disgraceful on the part of the concerned Minister.

ಹೊಂಬಳ ಗ್ರಾಮದಲ್ಲಿ ಜನತಾ ಗೃಹಗಳ ಪಾಕೆಟ್‌ನಲ್ಲಿ ಎಲ್ಲರೂ ಬಡವರೂ ಹಿಂದುಳಿದ ವರ್ಗದವರೂ ವಾಸಿಸುತ್ತಾರೆ. ಅಲ್ಲಿ ವಿದ್ಯುತ್ ಕಂಬಗಳಿದ್ದರೂ ಸಹ ದೀಪಗಳಿರುವುದಿಲ್ಲ. ಜಿಲ್ಲಾಪರಿಷತ್ ಬಂದು ಒಂದು ವರ್ಷವಾದರೂ ಬಲ್ಬ್ ಹಾಕಲಾಗಿಲ್ಲ. ಇಲ್ಲಿರುವ ಸುಮಾರು ೨೦೦ ಮನೆಗಳಲ್ಲಿರುವ ಸಾವಿರಾರು ಜನರು ಕತ್ತಲಿನಲ್ಲಿಯೇ ಕಾಲಕಳೆಯಬೇಕಾಗಿದೆ. ಈ ಪ್ರದೇಶದಲ್ಲಿ ರಾತ್ರಿ ತಿರುಗುವಾಗ ಒಂದು ನಾಗರಹಾವು ಕಡಿದು ಯಾವ ಅಘಾತವೂ ಪ್ರಯೋಜನವಾಗದ್ದರಿಂದ ಈಚೆಗೆ ಹಡಪದ ಎಂಬುವನು ಮರಣ ಹೊಂದಿದ್ದಾನೆ. ಈ ಬಗ್ಗೆ ಇಲ್ಲಿರುವ ಕತ್ತಲೆಯ ನಿವಾರಣೆಗಾಗಿ ಕ್ರಮವನ್ನು ಯಾವಾಗ ಕೈಕೊಳ್ಳುವಿರೆಂಬ ಬಗ್ಗೆ ಮಾನ್ಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಖಾತೆಯ ರಾಜ್ಯ ಸಚಿವರು).—ಸನ್ಮಾನ್ಯ ಸಭಾಧ್ಯಕ್ಷರೆ. ಮಾನ್ಯ ಹಿರಿಯ ಸದಸ್ಯರಾದ ಪಾಟೀಲರು ಹೊಂಬಳ ಗ್ರಾಮದ ಬೀದಿ ದೀಪಗಳ ಬಗ್ಗೆ ತಿಳಿಸಿದ್ದಾರೆ.